ಇ) ಸರ್ಕಾರವು ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಹಂತ ಹಂತವಾಗಿ ಮಿನಿ ವಿಧಾನಸೌಧಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಿದೆ

ಈ) ಅನುದಾನದ ಲಭ್ಯತೆಯನ್ನು ಆಧರಿಸಿ ಚಿಕ್ಕಬಳ್ಳಾಪುರದಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು

778 (381) ಶ್ರೀಮತಿ ಪರಿಮಳ ಕೆ ಎಸ್ (ಹನೂರು) (ವಿಧಾನಸಭಾ ಸದಸ್ಯರು) ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಡಾ ನಂಜುಂಡಪ್ಪ ವರದಿ ಪ್ರಕಾರ ಕೊಳ್ಳೇಗಾಲ ತಾಲ್ಲೂಕು ಅತ್ಯಂತ ಹಿಂದುಳಿದ ತಾಲ್ಲೂಕು ಎಂದು ಪರಿಗಣಿಸಲ್ಪಟ್ಟಿದೆಯೇ ,

ಆ) ಹಾಗಿದ್ದಲ್ಲಿ, ಈ ತಾಲ್ಲೂಕಿಗೆ ಹಮ್ಮಿಕೊಂಡಿರುವ ವಿಶೇಷ ಕಾರ್ಯಕ್ರಮಗಳೇನು ,

ಇ) ಸರ್ಕಾರ ಇದಕ್ಕಾಗಿ ಒದಗಿಸಿರುವ ಅನುದಾನವೆಷ್ಟು ?

ಶ್ರೀ ರಾಮಚಂದ್ರಗೌಡ (ಯೋಜನಾ ಸಚಿವರು)

ಅ) ಕೊಳ್ಳೇಗಾಲ ತಾಲ್ಲೂಕು ಅತ್ಯಂತ ಹಿಂದುಳಿದ ತಾಲ್ಲೂಕುಗಳ ವೈಕಿ ಒಂದು ಎಂದು ವರಿಗಣಿಸಲಾಗಿದೆ

ಆ) ಪ್ರಾದೇಶಿಕ ಅಸಮತೋಲನ ನಿವಾರಣ ಉನ್ನತಾಧಿಕಾರ ಸಮಿತಿಯು 114 ತಾಲ್ಲೂಕುಗಳನ್ನು ಅತ್ಯಂತ ಹಿಂದುಳಿದ, ಅತೀ ಹಿಂದುಳಿದ ಹಾಗೂ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಿ ಈ ತಾಲ್ಲೂಕುಗಳ ಅಭಿವೃದ್ಧಿಗೆ 16 ಸಾವಿರ ಕೋಟಿ ರೂ ಗಳ ವಿಶೇಷ ಅಭಿವೃದ್ಧಿ ಯೋಜನೆಯನ್ನು ಸಿದ್ಧ ಪಡಿಸಲು ಶಿಪಾರಸ್ಸು ಮಾಡಿದೆ ಉತ್ತರ ಕರ್ನಾಟಕದ ಪ್ರದೇಶಕ್ಕೆ ಬೇಕಾಗಿರುವ ಹಣವು 9600 ಕೋಟಿ ರೂ ಗಳು ಇದರ ವೈಕಿ ಶೇಕಡ 50ರಷ್ಟು ಹಣವನ್ನು ಒದಗಿಸಲು ಕೇಂದ್ರ ಸರ್ಕಾರಕ್ಕೆ ಕೋರಲಾಗಿದೆ ಇದರ ಬಗ್ಗೆ ಭಾರತ ಸರ್ಕಾರದಿಂದ ಉತ್ತರವನ್ನು ನಿರೀಕ್ಷಿಸಲಾಗಿದೆ ಆದರೂ ಈ ತಾಲ್ಲೂಕುಗಳ ಅಭಿವೃದ್ಧಿಗೆ ರಾಜ್ಯ ಹಾಗೂ ಜಿಲ್ಲಾ ವಲಯ ಯೋಜನೆಗಳಿಂದ ಹಣವನ್ನು ಒದಗಿಸಲಾಗುತ್ತಿದೆ

ಇ) ವಿವಿಧ ಅಭಿವೃದ್ಧಿ ಇಲಾಖೆಗಳ ಮೂಲಕ ರಾಜ್ಯ ಹಾಗೂ ಜಿಲ್ಲಾ ವಲಯ ಯೋಜನೆಗಳಡಿ ಹಣವನ್ನು ಒದಗಿಸಲಾಗುತ್ತಿದೆ

779 (1111) ಶ್ರೀ ಬಿ ಆರ್ ಪಾಟೀಲ್ (ಆಳಂದ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುದುರೆಮುಖ ದಿನಗೂಲಿ ನೌಕರರ ಪುನರ್ವಸತಿ ಬಗ್ಗೆ ಸರ್ಕಾರ ಯಾವ ಯೋಜನೆ ಹಾಕಿಕೊಂಡಿದೆ ,

ಆ) ಪುನರ್ವಸತಿ ಕಾರ್ಯ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಬಂದಿದ್ದಲ್ಲಿ, ಇದರ ಬಗ್ಗೆ ಸರ್ಕಾರದ ನಿರ್ದಿಷ್ಟವಾದ ನಿಲುವೇನು ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ದಿನಾಂಕ 31 12 2005ರಿಂದ ಕುದುರೆಮುಖ ಕಬ್ಬಿಣ ಅದಿರು ಕಂಪೆನಿ ನಿಯಮಿತ ಸಂಸ್ಥೆಯ ಗಣಿಗಾರಿಕೆ ಸ್ಥಗಿತಗೊಂಡಿದೆ ಕುದುರೆಮುಖ ಕಬ್ಬಿಣ ಅದಿರು ಕಂಪೆನಿ ನಿಯಮಿತ ಸಂಸ್ಥೆಯು ಕೇಂದ್ರ ಸ್ವಾಮ್ಯದ ಸಂಸ್ಥೆಯಾಗಿದ್ದು ಅಲ್ಲಿನ, ನೌಕರರ ಸೇವಾ ವಿಷಯವು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ ಸಂಸ್ಥೆಯ ಗಣಿಗಾರಿಕೆ ಕೆಲಸ ಸ್ಥಗಿತಗೊಂಡಿದ್ದರೂ, ಸಂಸ್ಥೆಯು ಯಾವುದೇ ನೌಕರರನ್ನು ಇದುವರೆವಿಗೂ ಕೆಲಸದಿಂದ ತೆಗೆದುಹಾಕಿರುವುದಿಲ್ಲ ಹಾಗೂ ಈ ಹಿಂದೆ ಯಾವ ರೀತಿ ನೌಕರರಿಗೆ ವೇತನ ನೀಡಲಾಗುತ್ತಿತ್ತೋ ಅದೇ ರೀತಿ ನೌಕರರಿಗೆ ವೇತನವನ್ನು ಕುದುರೆಮುಖ ಕಂಪೆನಿಯು ನೀಡುತ್ತಿದೆ ಎಂದು ತಿಳಿದುಬಂದಿದೆ ಆದರೆ, ಗಣಿಗಾರಿಕೆಗೆ ಪೂರಕವಾಗಿದ್ದಂತಹ ಹಲವಾರು ಕಾರ್ಯಗಳು ನಿಂತಿರುವುದರಿಂದ, ಈ ಕಾರ್ಯಗಳಲ್ಲಿ ತೊಡಗಿಸಿಕೊಂಡಂತಹ ದಿನಗೂಲಿ ನೌಕರರುಗಳಿಗೆ ಕೆಲಸವಿಲ್ಲದಿರುವುದು ತಿಳಿದುಬಂದಿದೆ ಇವರು ಸಂಸ್ಥೆಯ ಖಾಯಂ ನೌಕರುಗಳಲ್ಲಿ ಈ ನೌಕರರ ಮನವರ್ಸತಿಗೆ ರಾಜ್ಯ ಸರ್ಕಾರ ಯಾವುದೇ ಯೋಜನೆಯನ್ನು ಹಾಕಿಕೊಂಡಿಲ್ಲ

ಕರ್ನಾಟಕದಲ್ಲಿ ಕೈಗಾರಿಕ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗಲು ಅನುಕೂಲವಾಗುವಂತೆ ಕುದುರೆಮುಖ ಕಬ್ಬಿಣ ಅದಿರು ಕಂಪೆನಿ ನಿಯಮಿತ ಸಂಸ್ಥೆಗೆ ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ 116 50 ಹೆಕ್ಟೇರ್ ಪ್ರದೇಶವನ್ನು ಹಾಗೂ ಬಳ್ಳಾರಿ ಜಿಲ್ಲೆಯ ರವಣದುರ್ಗ ಪ್ರದೇಶದಲ್ಲಿ 810 00 ಹೆಕ್ಟೇರ್ ಪ್ರದೇಶವನ್ನು ನ್ಯಾಯಾಲಯದ ಆದೇಶಕ್ಕೆ ಒಳಪಟ್ಟು ಗಣಿಗಾರಿಕೆಗಾಗಿ ಒದಗಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಕುದುರೆಮುಖ ಕಬ್ಬಿಣದ ಅದಿರು ಕಂಪೆನಿ ನಿಯಮಿತ ಸಂಸ್ಥೆಗೆ ಬೇರೆ ಹೊಸ ಗಣಿಗುತ್ತಿಗೆ ಮಂಜೂರಾದಾಗ ಸದರಿ ದಿನಗೂಲಿ ನೌಕರರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಸಂಬಂಧಿಸಿದ ಕಂಪೆನಿಯವರು ಸೂಕ್ತಕ್ರಮ ಕೈಗೊಳ್ಳುವರು ಎಂದು ನಿರೀಕ್ಷಿಸಲಾಗಿದೆ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

780 (889) ಶ್ರೀ ಪಾಟೀಲ ಡಿ ಆರ್ (ಗದಗ) ಮಾನ್ಯ ಯೋಜನಾ ನಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಣಕಾಸು ವರ್ಷದಲ್ಲಿ ಯೋಜನೆಗಳಿಗಾಗಿ ನಿಗದಿಯಾದ ಹಣವೆಷ್ಟು , (ಇಲಾಖಾವರು ಮಾಹಿತಿ ನೀಡುವುದು) ,

ಆ) ಇದರಲ್ಲಿ ರಾಜ್ಯದ ಹಾಗೂ ಕೇಂದ್ರದ ಪಾಲೆಷ್ಟು ,

ಇ) 2007ನೇ ಜನವರಿ 31ರವರೆಗೆ ವಿವಿಧ ಇಲಾಖೆಗಳಲ್ಲಿ ಖರ್ಚಾದ ಹಣ ಎಷ್ಟು , (ಇಲಾಖಾವಾರು ಮಾಹಿತಿ ನೀಡುವುದು) ,